ಆ) ಹಾಗಿದ್ದಲ್ಲಿ ಸ್ವಂತ ಕಟ್ಟಡ ಯಾವಾಗ ನಿರ್ಮಾಣವಾಗುತ್ತದೆ ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಆ) ಮಂಜೂರಾಗಿದೆ.

ಆ) ಕಾಲೇಜು ಶಿಕ್ಷಣ ನಿರ್ದೇಶಕರಿಂದ ನಕ್ಷೆ ಮತ್ತು ಅಂದಾಜಿನೊಂದಿಗೆ ಪ್ರಸ್ತಾವನೆ ಸ್ವೀಕರಿಸಿದ ನಂತರ ಮುಂದಿನ ಆರ್ಥಿಕ ಸಾಲಿನಲ್ಲಿ ಸರಿಯಾದ ಕಾಲೇಜಿನ ಕಟ್ಟಡ ನಿರ್ಮಿಸಲು ಹಣ ಒದಗಿಸುವುದನ್ನು ಪರಿಶೀಲಿಸಲಾಗುವುದು.

ಕಡೂರು ತಾಲ್ಲೂಕಿಂಗಳಲ್ಲಿ ರಸ್ತೆ ರಿಪೇರಿ ಬಗ್ಗೆ

೧೩೮೬. (೨೦೫೫) ಶ್ರೀ ಪಿ. ಬಿ. ಓಂಕಾರಮೂರ್ತಿ (ಕಡೂರು).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕಡೂರು ತಾಲ್ಲೂಕಿನ ಲೋಕೋಪಯೋಗಿ ಇಲಾಖೆಗೆ ಸೇರಿದ ಈ ಕೆಳಕಂಡ ಪಿ.ಡಬ್ಲ್ಯೂ.ಡಿ. ರಸ್ತೆಗಳ ದುಸ್ಥಿತಿಯಿಂದಾಗಿ ಬಸ್ ಸಂಚಾರಕ್ಕೆ ಅನಾನುಕೂಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಬೆಲಗೂರು—ಪಂಚನಹಳ್ಳಿ ರಸ್ತೆ,
ಕಡೂರು—ಮರವಂಜಿ ರಸ್ತೆ,
ಕಡೂರು—ಹೊಸದುರ್ಗ ರಸ್ತೆ,

ಸಿಂಗಟಗೆರೆ–ಯಗಟಿ ರಸ್ತೆ.

ಪುರ–ಪಾಯಾ ದೊಡಗಜೆರೆ–ಚಿಕ್ಕಬಸೂರು–ಕಡೂರು ರಸ್ತೆ.

ಆ) ಸದರಿ ರಸ್ತೆಗಳಲ್ಲಿ ವಾಹನಗಳ ಸಂಚಾರ ಜಾಸ್ತಿಯಾಗಿರುವುದರಿಂದ ರಸ್ತೆ ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು):—

ಅ) ಮೇಲಿನ ೫ ರಸ್ತೆಗಳಪೈಕಿ ಕ್ರಮಸಂಖ್ಯೆ ೧, ೨ ಹಾಗೂ ೪ ರಲ್ಲಿನ ರಸ್ತೆಗಳು ಲೋಕೋಪಯೋಗಿ ಇಲಾಖೆಯ, ಸಂಪರ್ಕ ಮತ್ತು ಕಟ್ಟಡಗಳು ವಲಯದ ವ್ಯಾಪ್ತಿಗೆ ಬರುತ್ತದೆ. ಕ್ರಮಾಂಕ ೩ ಹಾಗೂ ೫ ರಲ್ಲಿನ ರಸ್ತೆಗಳು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರುತ್ತವೆ. ರಸ್ತೆಗಳ ಸ್ಥಿತಿಯು ಸಾಕಷ್ಟು ತೃಪ್ತಿಕರವಾಗಿದೆ.

ಆ) ವರ್ಷ, ವರ್ಷ ದೊರಕುತ್ತಿರುವ ಹಣಕಾಸು ಲಭ್ಯತೆಗನುಗುಣವಾಗಿ ರಸ್ತೆಗಳ ದುರಸ್ತಿ ಹಾಗೂ ಸುಧಾರಣೆ ಕೆಲಸವನ್ನು ಕೈಗೊಂಡು ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಪ್ರಯತ್ನಿಸಲಾಗುತ್ತಿದೆ.

ಉಪನ್ಯಾಸಕರ ನೇಮಕಾತಿಯ ಬಗ್ಗೆ

೧೩೮೭ (೨೦೩೪) ಶ್ರೀ ಪಿ. ಬಿ. ಓಂಕಾರಮೂರ್ತಿ (ಕಡೂರು).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;—

ಅ) ಕಡೂರು ತಾಲ್ಲೂಕಿಗೆ ಸೇರಿದ ಪಂಚನಹಳ್ಳಿ ಯಗಟಿ ಮತ್ತು ಕಡೂರು ಟೌನ್‌ಗಳಲ್ಲಿರುವ ಸರ್ಕಾರಿ ಕಿರಿಯ ಕಾಲೇಜುಗಳಲ್ಲಿ ಆಂಗ್ಲ ಮತ್ತು ವಾಣಿಜ್ಯ ಉಪನ್ಯಾಸಕರು ಗಳಿಲ್ಲದೇ ಸದರಿ ವಿಷಯ ಗಳಲ್ಲಿ ವಿದ್ಯಾರ್ಥಿಗಳು ಫೇಲಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಖಾಲಿ ಜಾಗಕ್ಕೆ ಉಪನ್ಯಾಸಕರನ್ನು ನೇಮಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಅ) ಬಂದಿದೆ.

ಆ) ಈಗಾಗಲೇ ರಾಜ್ಯ ಮಟ್ಟದ ನೇಮಕಾತಿ ಸಮಿತಿಯಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು ಇವರುಗಳನ್ನು ಖಾಲಿ ಹುದ್ದೆಗೆ ನೇಮಿಸಲು ಆರ್ಥಿಕ ಮಿತವ್ಯಯವನ್ನು ಸಡಿಲಿಸಿ ಹಾಗೂ ಹೊಸ ನೇಮಕಾತಿ ಆದೇಶದನ್ವಯ ಹುದ್ದೆಗಳನ್ನು ಪರಿಗಣಿಸಬೇಕಾಗಿರುವುದರಿಂದ ಈ ಬಗ್ಗೆ ಪರಿಶೀಲಿಸಲಾಗುತ್ತಿದ್ದು ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿರುವ ಪಾಲಿಟೆಕ್ನಿಕ್ ಕಾಲೇಜುಗಳ ವಿಚಾರ

೧೩೮೮(೧೪೦೭) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿರುವ ಪಾಲಿಟೆಕ್ನಿಕ್‌ಗಳ ಸಂಖ್ಯೆ ಎಷ್ಟು ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳ ಸಂಖ್ಯೆ ಎಷ್ಟು ?

ಆ) ಇವುಗಳಲ್ಲಿ ನಿಗದಿಪಡಿಸಿರುವ ವಿದ್ಯಾರ್ಥಿ ಸೇರ್ಪಡೆಯ ಸಾಮರ್ಥ್ಯವೆಷ್ಟು? (ಪಾಲಿಟೆಕ್ನಿಕ್ ವಾರು ವಿವರಗಳು)

ಇ) ಪಾಲಿಟೆಕ್ನಿಕ್‌ಗಳಲ್ಲಿ ಅಧ್ಯಯನದ ಪೂರಕ ವ್ಯವಸ್ಥೆಗಳ ಕುರಿತು ಅಭ್ಯಸಿಸಿ ವರದಿ ಸಲ್ಲಿಸಲು ಸರ್ಕಾರ ತಜ್ಞರ ಸಮಿತಿಯನ್ನು ನೇಮಕ ಮಾಡಿತ್ತೆ ?

ಈ) ಹಾಗಿದ್ದರೆ ಸಮಿತಿಯ ವರದಿಯನ್ವಯ ಕಟ್ಟಡ, ಪ್ರಯೋಗ ಶಾಲೆ, ಇನ್ನಿತರ ಪ್ರಾಥಮಿಕ ಸೌಲಭ್ಯಗಳ ಕೊರತೆಯಿರುವ ಪಾಲಿಟೆಕ್ನಿಕ್‌ಗಳ ಹೆಸರುಗಳೇನು ?

ಉ) ಈ ಪಾಲಿಟೆಕ್ನಿಕ್‌ಗಳ ಮಾನ್ಯತೆ ರದ್ದುಪಡಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಅ) ಒಟ್ಟು ಪಾಲಿಟೆಕ್ನಿಕ್‌ಗಳು : ೧೮೨

ಸರ್ಕಾರಿ	೩೩	ಒಟ್ಟು ಖಾಸಗಿ ಪಾಲಿಟೆಕ್ನಿಕ್‌ಗಳು ೧೪೯
ಖಾಸಗಿ ಅನುದಾನಿತ	೮	
ಖಾಸಗಿ ಅನುದಾನ ರಹಿತ	೧೪೧	

ಆ) ಸಿ.ಡಿ.ಕೆ (ಪಾಲಿಟೆಕ್ನಿಕ್‌ವಾರು ವಿವರಗಳ ಪಟ್ಟಿಯನ್ನು ಲಗತ್ತಿಸಿದೆ–ಅನುಬಂಧ–III)

ಇ) ಹೌದು.

ಈ) ವಿವರಣಾಪಟ್ಟಿಗಳನ್ನು ಲಗತ್ತಿಸಿದೆ. (ಅನುಬಂಧ I ಮತ್ತು II)

ಉ) ಸಂಬಂಧಪಟ್ಟ ಪಾಲಿಟೆಕ್ನಿಕ್‌ಗಳಲ್ಲಿ ಅಗತ್ಯವಾದ ಸೌಲಭ್ಯಗಳನ್ನು ಈಗ ಒದಗಿಸಿರುವ ಬಗ್ಗೆ ತನಿಖೆ ಮಾಡಿ ವರದಿಗಳನ್ನು ಸಲ್ಲಿಸಲು ನಾಲ್ಕು ಪರಿಣಿತ ಸಮಿತಿಗಳನ್ನು ರಚಿಸಲಾಗಿದೆ.